ಲೋಕೋಪಯೋಗಿ ಇಲಾಖೆಗೆ ನೋಂದಾಯಿತ ಕಂಟ್ರಾಕ್ಟರುಗಳಿಂದ ಬರಬೇಕಾದ ಹಣ

೧೨೭೭. ಶ್ರೀ ಗೋಪಾಲ ಮಂಕಂದ ಕಾನಡೆ (ಸಿರ್ಸಿ).—ಮಾನ್ಯ ಲೋಕೋಪಯೋಗಿ, ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಲೋಕೋಪಯೋಗಿ ಇಲಾಖೆಯ ನೊಂದಾಯಿತ ಕಂಟ್ರಾಕ್ಟರುಗಳಿಂದ ಬರಬೇಕಾದ ಬಾಕಿ ಹಣವೆಷ್ಟು ?

ಆ) ಸದರಿ ಬಾಕಿ ಹಣವನ್ನು ವಸೂಲು ಮಾಡಲು ಸರಕಾರದವರು ಕೈಗೊಂಡಿರುವ ಕ್ರಮವೇನು ?

ಇ) ಕೈಕೊಳ್ಳದಿದ್ದಲ್ಲಿ ಅದಕ್ಕೆ ಕಾರಣವೇನು.

ಈ) ಕಂಟ್ರಾಕ್ಟ್ ವಹಿಸಿಕೊಂಡು ಕೆಲಸ ನಿಲ್ಲಿಸಿ ಓಡಿ ಹೋಗಿರುವ ಕಂಟ್ರಾಕ್ಟರುಗಳ ಬಗ್ಗೆ ಕ್ರಮವನ್ನೇನಾದರೂ ಕೈಕೊಳ್ಳಲಾಗಿದೆಯೆ ?

ಉ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು). —

ಅ) ಕಂಟ್ರಾಕ್ಟ್ ಮೇಲೆ ಕೊಟ್ಟಿರುವ ಕೆಲವು ಕೆಲಸಗಳನ್ನು ಕಂಟ್ರಾಕ್ಟರುಗಳು ಪೂರ್ತಿ ಮಾಡದೆ ಮಧ್ಯದಲ್ಲಿ ಬಿಡುವುದು ಅಥವಾ ಕಂಟ್ರಾಕ್ಟುಗಳನ್ನು ರೀಸೆಂಡ್ ಮಾಡುವ ಪ್ರಕರಣಗಳಲ್ಲಿ ಹೆಚ್ಚುವರಿ ಖರ್ಚನ್ನು ಒಪ್ಪಂದದಂತೆ ಹಿಂದಿನ ಕಂಟ್ರಾಕ್ಟರ್‌ನಿಂದ ವಸೂಲು ಮಾಡಬೇಕಾಗುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ (ಸಂಪರ್ಕ ಮತ್ತು ಕಟ್ಟಡಗಳು) ಮತ್ತು ರಾಷ್ಟ್ರೀಯ ಹೆದ್ದಾರಿಗಳ ವಲಯ) ಹೀಗೆ ಈ ರೀತಿ ಹೆಚ್ಚಾಗಿ ಖರ್ಚಾಗಿರುವ ಹಣದ ಮೊತ್ತ ೫.೮೨ ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಆ) ಇ) ಈ) ಉ) : ಈ ರೀತಿ ಬರಬೇಕಾದ ಬಾಕಿ ಹಣವನ್ನು ಕಂಟ್ರಾಕ್ಟರುಗಳಿಂದ ವಸೂಲು ಮಾಡುವ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ:—

(೧) ಅವರುಗಳಿಂದ ವಸೂಲು ಮಾಡಿರುವ ಇ.ಎಂ.ಡಿ. ಮತ್ತು ಪ್ರಿಎಫ್.ಎಸ್.ಡಿ.ಯನ್ನು ಮುಟ್ಟುಗೋಲು ಹಾಕಲಾಗುತ್ತದೆ.

(೨) ಸದರಿ ಕಂಟ್ರಾಕ್ಟರುಗಳು ಬೇರೆ ವಲಯಗಳಲ್ಲಿ ಅಥವಾ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರೆ ಅವರಿಗೆ ಪಾವತಿ ಆಗಬೇಕಾಗಿರುವ ಹಣವನ್ನು ತಡೆಹಿಡಿಯಲು ಕೋರಲಾಗುತ್ತದೆ.

(೩) ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಬಾಕಿ ಹಣವನ್ನು ಕಂದಾಯದ ಬಾಕಿಯಂತೆ ವಸೂಲು ಮಾಡಲು ಕೋರಲಾಗುತ್ತದೆ.

(೪) ಕೆಲವು ಪ್ರಕರಣಗಳಲ್ಲಿ ನ್ಯಾಯಾಂಗದ ಕ್ರಮವನ್ನು ಕೈಗೊಳ್ಳಲಾಗುತ್ತದೆ. ಇಂತಹ ಬಾಕಿ ವಸೂಲಾತಿಗೆ ಕ್ರಮ ತೆಗೆದುಕೊಂಡ ಬಗ್ಗೆ ವಿಚಾರಿಸಲು ಮುಖ್ಯ ಇಂಜಿನಿಯರ್‌ರವರ ಕಛೇರಿಯಲ್ಲಿ ಒಂದು ಕೋಶವನ್ನು ರಚಿಸಲಾಗಿದೆ. ಈ ಕೋಶವು ಆಗಾಗ್ಗೆ ಸಭೆ ಸೇರಿ ಇಂತಹ ಪ್ರಕರಣಗಳನ್ನೆಲ್ಲಾ ಕ್ರಮ ತೆಗೆದುಕೊಂಡ ಬಗ್ಗೆ ಚರ್ಚಿಸಿ ವಿಂಗಡಿಸಿದ ಕ್ರಮ ತೆಗೆದುಕೊಳ್ಳಲಾಗುತ್ತದೆ.